# ಹಾನಗಲ್ ಪ್ರದೇಶದ ಕೆಲವು ಶಾಸನಾಧಾರಿತ ಕೆರೆಗಳು

**ನಾಗರಾಜ ತಳವಾರ***

**DOI: https://doi.org/10.5281/zenodo.22663072**

**ABSTRACT**

ಹಾವೇರಿ ಜಿಲ್ಲೆಯ ಹಾನಗಲ್ ಪ್ರದೇಶವು ಸಾಕಷ್ಟು ಪೌರಾಣಿಕ ಘಟನೆಗಳನ್ನು ಹೊಂದಿದೆ. "ಮಹಾಭಾರತದ ಕಾಲದಲ್ಲಿ ಹಾನಗಲ್ ವಿರಾಟರಾಜನ ರಾಜಧಾನಿಯಾಗಿತ್ತೆಂಬ ನಂಬಿಕೆ ಇದೆ. ಇದಕ್ಕೆ ಆಧಾರವೆಂಬಂತೆ ಕೀಚಕನ ಗರಡಿಮನೆಯೊಂದು ಇಲ್ಲಿ ಇದ್ದುದು ತಿಳಿದು ಬರುತ್ತದೆ. ಇದು ವಿರಾಟ ರಾಜನ ರಾಜಧಾನಿಯಾಗಿತ್ತೆಂಬ ಅಂಶ 12ನೇಯ ಶತಮಾನದ ಒಂದು ಶಾಸನದಲ್ಲಿ ವ್ಯಕ್ತವಾಗಿದೆ. ಹಾವೇರಿ ಪಟ್ಟಣವನ್ನು ನಳ ಮಹಾರಾಜನು ಸ್ಥಾಪಿಸಿದನೆಂದು ಅಲ್ಲಿಯ ಒಂದು ಶಾಸನ ಹೇಳುತ್ತದೆ. ಈ ಪ್ರದೇಶದಲ್ಲಿ ಕ್ರಿ.ಶ 1134 ರ ಹಾವೇರಿ ಶಾಸನವು ಅಗ್ರಹಾರ ಪಾವರಿಯಲ್ಲಿ ಆಳ್ವಿಕೆ ಮಾಡಿದ ದಂಡನಾಯಕ ಕುಮಾರ ಪದ್ಮನಾಭರಸನು ಈಗಾಗಲೇ ಕಟ್ಟಿಸಿದ ಕೆರೆಯನ್ನು ಕದಂಬ ಮನೆತನದ ಮಲ್ಲಿಕಾರ್ಜುನನು ಜೀರ್ಣೋದ್ಧಾರಗೊಳಿಸಿದನೆಂದು ತಿಳಿಸುತ್ತದೆ. ಅಂತೆಯೇ ಹಾನಗಲ್ ಪ್ರದೇಶದಲ್ಲಿ ಎರಡನೇ ಜಗದೇಕ ಮಲ್ಲನ ಸಾಮಂತ ದೇವಗಾವುಂಡನು ಕೊಳನೂರು ಗ್ರಾಮದ ಹೊರಭಾಗದಲ್ಲಿ ಬಾವಿ ಕಟ್ಟಿಸುವುದರ ಜೊತೆಗೆ ಒಂದು ಕೆರೆಯನ್ನು ನಿರ್ಮಿಸಿದ ಅವನು ಈ ಕಾರ್ಯಗಳಿಗೆ ತನ್ನ ಆಸ್ತಿಯನ್ನು ಮಾರಿಬಂದ ಹಣವನ್ನು ವ್ಯಯಿಸಿದ.

ಹೀಗೆ ಹಾನಗಲ್ ಪ್ರದೇಶದಲ್ಲಿ ರಾಜರು, ಮಂತ್ರಿಗಳು, ದಂಡನಾಯಕರು, ಗ್ರಾಮದ ಅಥವಾ ಸ್ಥಳೀಯ ಆಡಳಿತದ ಮುಖ್ಯಸ್ಥರಾಗಿದ್ದ ಗಾವುಂಡ, ಗೌಡರು ಮತ್ತು ನಾಳ್ಗಾವುಣ್ಡರು (ನಾಡಗೌಡರು) ಹಲವಾರು ಕೆರೆಗಳನ್ನು ನಿರ್ಮಿಸಿ, ನೀರಾವರಿ ಸೌಲಭ್ಯದ ಮೂಲಕ ಫಸಲನ್ನು ಹೆಚ್ಚು ಹೆಚ್ಚು ಬೆಳೆಯಲು ಪ್ರೋತ್ಸಾಹಿಸಿದರು. ಇವರು ಕೆರೆಯನ್ನು ಕಟ್ಟಿಸುವುದು ಜನತೆಯ ಔದಾರ್ಯ ಮತ್ತು ದಾನ ಶೀಲತೆಯ ಸಂಕೇತವಾಗಿತ್ತು. ಇದು ಧಾರ್ಮಿಕ ಕಾರ್ಯವೆಂದು ಮೋಕ್ಷಸಾಧನೆಯ

* **ಡಾ. ನಾಗರಾಜ ತಳವಾರ,** ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ.

ಮಾರ್ಗವೆಂದು ಅಂದು ಭಾವಿಸಿದ್ದರು. ಕೆಲವೊಂದು ಸಲ ಕೆರೆಯ ಜೀರ್ಣೋದ್ಧಾರ ಮಾಡಿದ ಉಲ್ಲೇಖಗಳು ಶಾಸನಗಳಲ್ಲಿವೆ.

**KEYWORDS:** ಸಾಮಂತರು, ಶಾಸನಗಳು, ಹಾನಗಲ್, ನೀರಾವರಿ, ಕೆರೆಗಳು, ಕಟ್ಟೆ, ನಿರ್ಮಾಣ, ಪ್ರದೇಶ.

**ಪೀಠಿಕೆ**

ಕರ್ನಾಟಕ ಭೂ ಪ್ರದೇಶವನ್ನು ಆಳ್ವಿಕೆ ಮಾಡಿದ ರಾಜಮನೆತನಗಳಾದ, ಕದಂಬರು, ಬಾದಾಮಿ ಚಾಲುಕ್ಯರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ವಿಜಯನಗರ ಅರಸರು ಹಾಗೂ ಸ್ಥಳೀಯ ಆಡಳಿತ ಪಾಳೆಯಪಟ್ಟುಗಳು ಮತ್ತು ಸಾಮಂತರು ರಾಜ್ಯಭಾರ ಮಾಡಿದ್ದಾರೆ. ಆ ಕಾಲದಲ್ಲಿ ಅವರು ಸಮಾಜದ ಹಿತಕ್ಕಾಗಿ ಮಾಡಿದಂತಹ ಕೆಲಸಕಾರ್ಯಗಳಲ್ಲಿ ಕೆರೆಗಳ ನಿರ್ಮಾಣ ಕಾರ್ಯ ನಮ್ಮ ನಾಡಿನಲ್ಲಿ ಇಂದಿಗೂ ಉಳಿದುಬಂದಿವೆ. ಹೀಗೆ ಆಳ್ವಿಕೆ ಮಾಡಿದ ವಿವಿಧ ಅರಸರುಗಳ ಶಾಸನಗಳು ಕೆರೆಯನ್ನು ಉಲ್ಲೇಖಿಸುವಂತೆ ಕೆರೆ-ಕಟ್ಟೆ, ಸಾಗರ, ಸಮುದ್ರ ಹಾಗೂ ಹೊಂಡ, ಕಟ್ಟೆ, ತಟಾಕ, ಹಿರಿಯ ಕೆರೆ, ಹೆಗ್ಗೇರೆ, ಪಿರಿಯಕೆರೆ, ಇಲ್ಲವೆ ಚಿಕ್ಕಕೆರೆ ಹಾಗೂ ಕನ್ನಗೆರೆ (ಹೊಸಕೆರೆ) ಎಂದು ಹೆಸರಿಸಿವೆ,

ಹಾವೇರಿ ಜಿಲ್ಲೆಯ ಹಾನಗಲ್ ಪ್ರದೇಶವು ಸಾಕಷ್ಟು ಪೌರಾಣಿಕ ಘಟನೆಗಳನ್ನು ಹೊಂದಿದೆ. "ಮಹಾಭಾರತದ ಕಾಲದಲ್ಲಿ ಹಾನಗಲ್ ವಿರಾಟರಾಜನ ರಾಜಧಾನಿಯಾಗಿತ್ತೆಂಬ ನಂಬಿಕೆ ಇದೆ. ಇದಕ್ಕೆ ಆಧಾರವೆಂಬಂತೆ ಕೀಚಕನ ಗರಡಿಮನೆಯೊಂದು ಇಲ್ಲಿ ಇದ್ದುದು ತಿಳಿದು ಬರುತ್ತದೆ. ಇದು ವಿರಾಟ ರಾಜನ ರಾಜಧಾನಿಯಾಗಿತ್ತೆಂಬ ಅಂಶ 12ನೇಯ ಶತಮಾನದ ಒಂದು ಶಾಸನದಲ್ಲಿ ವ್ಯಕ್ತವಾಗಿದೆ. ಹಾವೇರಿ ಪಟ್ಟಣವನ್ನು ನಳ ಮಹಾರಾಜನು ಸ್ಥಾಪಿಸಿದನೆಂದು ಅಲ್ಲಿಯ ಒಂದು ಶಾಸನ ಹೇಳುತ್ತದೆ. ಬಕಾಸುರನೆಂಬ ರಾಕ್ಷಸ ವಾಸವಾಗಿದ್ದ 'ಏಕಚಕ್ರ ನಗರ' ಇಂದಿನ ಬಂಕಾಪುರವೆಂಬ ಹೇಳಿಕೆ ಇದೆ. ಈಗಲೂ ಈ ಸ್ಥಳದಲ್ಲಿರುವ ಬಕಾಸುರನ ಕೆರೆ ಅಥವಾ ರಾಕ್ಷಸನ ಕೆರೆ ಇದಕ್ಕೊಂದು ಆಧಾರವಾಗಿದೆ. ಬಕಾಸುರನನ್ನು ಬಂಕಾಪುರದ ಸಮೀಪ ಕುಂದೂರಿನಲ್ಲಿ ಭೀಮಸೇನನು ವಧಿಸಿದನೆಂದು ಐತಿಹ್ಯಗಳು ಇವೆ.

ಹಾನಗಲ್ ಪ್ರದೇಶದಲ್ಲಿ ಕಲ್ಯಾಣ ಚಾಲುಕ್ಯರ ಮಾಂಡಲಿಕರಾಗಿ ಹಾನಗಲ್ ಕದಂಬರು ಹಾವೇರಿ ಪ್ರದೇಶದಲ್ಲಿ ಸುಮಾರು ಕ್ರಿ.ಶ 8 ನೇ ಶತಮಾನದಿಂದ ಕ್ರಿ.ಶ 12 ನೇ ಶತಮಾನದವರೆಗೆ ಬನವಾಸಿ ಕದಂಬರ ಉತ್ತರಾಧಿಕಾರಿಗಳೆಂದು ಕರೆದುಕೊಂಡು ಬನವಾಸಿಯಿಂದಲೇ ಮೊದಲು ಆಳ್ವಿಕೆ ಮಾಡುತ್ತಿದ್ದ ಬಗ್ಗೆ ತಿಳಿದುಬರುತ್ತದೆ. ಚಟ್ಟಯ್ಯದೇವ ಎಂಬಾತನು ಕ್ರಿ.ಶ 869 ರಲ್ಲಿ ರಾಷ್ಟ್ರಕೂಟ ಮಾಂಡಲೀಕರಾಗಿ ಆಳುತ್ತಿದ್ದುದರ ಬಗ್ಗೆ ಉತ್ತರ ಕನ್ನಡದ ಸೋಮನಹಳ್ಳಿಯಲ್ಲಿ ಕ್ರಿ.ಶ 869 ರ ಶಾಸನವು

ತಿಳಿಸುತ್ತದೆ. ಈತನು ಬನವಾಸಿ 12000, ಸಾಂತಳಿಗೆ 1000, ಪ್ರದೇಶಗಳನ್ನು ಆಳುತ್ತಿದ್ದನು. ಬಂಕಾಪುರದ ಕದಂಬರು ಎಂಬ ಇನ್ನೊಂದು ಶಾಖೆಯು ಆಗ ಹಾನಗಲ್ ಮತ್ತು ಬನವಾಸಿಗಳನ್ನು ಆಳುತ್ತಿದ್ದರೆಂದು ಡಾ. ಬಿ. ಆರ್ ಗೋಪಾಲ ಅವರು ಹೇಳಿದ್ದಾರೆ. ಹಾನಗಲ್ ಪ್ರದೇಶದ ಕೆಲವು ಶಾಸನಗಳನ್ನು ಅವಲೋಕಿಸಿದಾಗ ಮಂತ್ರಿಗಳು ಮಹಾಪ್ರಧಾನರು ಮತ್ತು ದಂಡನಾಯಕರು ಸಹ ಕೆರೆಗಳನ್ನು ಕಟ್ಟಿಸಲು ಆಸಕ್ತಿ ತೋರಿ ಸಮಾಜಕ್ಕೋಸ್ಕರ ಹಲವಾರು ಜನೋಪಯೋಗಿ ಕಾರ್ಯಗಳನ್ನು ಮಾಡುತ್ತಾ ಜೊತೆಗೆ ಕೆರೆ-ಕಟ್ಟೆಗಳನ್ನು ನಿರ್ಮಿಸಿ ರಾಜ್ಯಕ್ಕೆ ಸಮರ್ಪಿಸುತ್ತಿದ್ದರು ಎಂದು ತಿಳಿಯುತ್ತದೆ.

ಅಂತೆಯೇ ಐತಿಹಾಸಿಕ ಪುನರ್‌ರಚನೆಗೆ ಶಾಸನಗಳು ಅತಿ ಉಪಯುಕ್ತ ಆಕರಗಳಾಗಿವೆ. ಸಾವಿರಾರು ಶಾಸನಗಳು ಕ್ರಿ. ಪೂ 500 ರಿಂದ ಸುಮಾರು ಕ್ರಿ.ಶ 1800 ವರೆಗೆ ಅಸಂಖ್ಯಾತ ಕೆರೆಗಳ ಇದ್ದುದರ ಬಗ್ಗೆ ಬೆಳಕು ಚೆಲ್ಲುತ್ತವೆ. ಕರ್ನಾಟಕದ ಹೊರಗೆ ಕೆರೆಗೆ ಸಂಬಂಧಿಸಿದಂತೆ ಕ್ರಿ.ಶ 150 ರ ರುದ್ರದಾಮನ ಜುನಾಗಡ ಶಾಸನವೊಂದು ಶತಮಾನಗಳ ಕಾಲ ಅಸ್ತಿತ್ವದಲ್ಲಿದ್ದ ಜಲಾಶಯವೊಂದರ ಚರಿತ್ರೆ ಬಗ್ಗೆ ಪೂರ್ಣ ವಿವರವನ್ನು ಕೊಡುತ್ತದೆ. ಅದು ಭಾರತೀಯ ಇತಿಹಾಸದ ಅತಿ ಪ್ರಾಚೀನ ಶಾಸನವಾಗಿದೆ. ಆ ಜಲಾಶಯವನ್ನು ಮೊದಲು ಕಟ್ಟಿದ್ದು ಮೌರ್ಯರು, ಕರ್ನಾಟಕದಲ್ಲಿ ಪ್ರಾಚೀನ ಕೆರೆಯ ಉಲ್ಲೇಖ ಕ್ರಿ.ಶ 4 ನೇ ಶತಮಾನಕ್ಕೆ ಸೇರಿದ್ದೆನ್ನಲಾದ ಚಿತ್ರದುರ್ಗದ ಚಂದ್ರವಳ್ಳಿಯ ಕೆರೆ ಎಂಬುದು, ಕದಂಬ ಮಯೂರವರ್ಮನ ಚಂದ್ರವಳ್ಳಿಯ ಶಾಸನದಿಂದ ತಿಳಿದುಬರುತ್ತದೆ.

**ಶಾಸನಾಧಾರಿತ ಕೆರೆಗಳು**

ಈ ಪ್ರದೇಶದ ಕ್ರಿ.ಶ 1134 ರ ಹಾವೇರಿ ಶಾಸನವು ಅಗ್ರಹಾರದ ಪಾವರಿಯಲ್ಲಿ ಆಳ್ವಿಕೆ ಮಾಡಿದ ದಂಡನಾಯಕ ಕುಮಾರ ಪದ್ಮನಾಭರಸನು ಈಗಾಗಲೇ ಕಟ್ಟಿಸಿದ ಕೆರೆಯನ್ನು ಕದಂಬ ಮನೆತನದ ಮಲ್ಲಿಕಾರ್ಜುನನು ಜೀರ್ಣೋದ್ಧಾರಗೊಳಿಸಿದನೆಂದು ತಿಳಿಸುತ್ತದೆ. ಹಾನಗಲ್ ಪ್ರದೇಶದಲ್ಲಿ ಎರಡನೇ ಜಗದೇಕ ಮಲ್ಲನ ಸಾಮಂತ ದೇವಗಾವುಂಡನು ಕೊಳನೂರು ಗ್ರಾಮದ ಹೊರಭಾಗದಲ್ಲಿ ಬಾವಿ ಕಟ್ಟಿಸುವುದರ ಜೊತೆಗೆ ಒಂದು ಕೆರೆಯನ್ನು ನಿರ್ಮಿಸಿದ. ಅವನು ಈ ಕಾರ್ಯಗಳಿಗೆ ತನ್ನ ಆಸ್ತಿಯನ್ನು ಮಾರಿ ಬಂದ ಹಣವನ್ನು ವ್ಯಯಿಸಿದ. ಕ್ರಿ.ಶ 1053 ರ ಒಂದನೇ ಸೋಮೇಶ್ವರನ ಶಾಸನದಿಂದ ಸೇನಬೋವ ನೇಮಯ್ಯ ಮುಂತಾದವರು ಸೇರಿ ಕಲಕೇರಿ ಕಾಂಚಿಸೆಟ್ಟಿಕೆರೆಗೆ ಮತ್ತು ಸೋಮೇಶ್ವರ ದೇವರ ನೈವೇದ್ಯಕ್ಕೆ ದಾನ ನೀಡಿದ್ದು ತಿಳಿಯುತ್ತದೆ. ತಿಳವಳ್ಳಿ ಶಾಸನದಲ್ಲಿ ತಿಳವಳ್ಳಿಯ ಪಿರಿಯಕೆರೆಯ ಕಲ್ಕಿಟ್ಟಂಗೆ ಹಲವಾರು ಜನರು ಹಣವನ್ನು ಬಿಟ್ಟರೆಂದು ಕಂಡು ಬರುತ್ತದೆ. ಕ್ರಿ.ಶ 1104 ರ ಅಬಲೂರು ಶಾಸನ ಅಬಲೂರು ಮಮ್ಮಗಾವುಂಡನು ಅಬಲೂರಿನಲ್ಲಿ ಒಂದು ತಟಾಕ ನಿರ್ಮಿಸಿದನೆಂದು ತಿಳಿಸುತ್ತದೆ. ಅದೇ ರೀತಿ ಕ್ರಿ.ಶ 1122 ರ ಕಾಗಿನೆಲೆ ಶಾಸನ, ಕಾಗಿನೆಲೆ ಗ್ರಾಮದಲ್ಲಿ ಕಾಳಗಾವುಂಡನು ಶಿವದೇವಾಲಯ ಕಟ್ಟಿಸುವುದರ ಜೊತೆಗೆ

ಕೆರೆ, ಕಾರಂಜಿ, ಹಾಗೂ ಹೂತೋಟ ನಿರ್ಮಿಸಿದನೆಂದು ತಿಳಿಸುತ್ತದೆ. ಕ್ರಿ.ಶ 1053 ರ ಒಂದನೇ ಸೋಮೇಶ್ವರನ ಶಾಸನದಿಂದ ಸೇನಬೋವ ನೇಮಯ್ಯ ಮುಂತಾದವರು ಸೇರಿ ಕಲಕೇರಿ ಕಾಂಚಿಸೆಟ್ಟಿಕೆರೆಗೆ ಮತ್ತು ಸೋಮೇಶ್ವರ ದೇವರ ನೈವೇದ್ಯಕ್ಕೆ ದಾನ ನೀಡಿದ್ದು ತಿಳಿಯುತ್ತದೆ.

ಹೀಗೆ ಹಾನಗಲ್ ಪ್ರದೇಶದಲ್ಲಿ ರಾಜರು, ಮಂತ್ರಿಗಳು, ದಂಡನಾಯಕರು, ಗ್ರಾಮದ ಅಥವಾ ಸ್ಥಳೀಯ ಆಡಳಿತದ ಮುಖ್ಯಸ್ಥರಾಗಿದ್ದ ಗಾವುಂಡ, ಗೌಡರು ಮತ್ತು ನಾಳ್ಗಾವುಣ್ಡರು (ನಾಡಗೌಡರು) ಹಲವಾರು ಕೆರೆಗಳನ್ನು ನಿರ್ಮಿಸಿ, ನೀರಾವರಿ ಸೌಲಭ್ಯದ ಮೂಲಕ ಕೃಷಿ ಫಸಲನ್ನು ಹೆಚ್ಚು ಹೆಚ್ಚು ಬೆಳೆಯಲು ಪ್ರೋತ್ಸಾಹಿಸಿದರು. ಕೆರೆಯನ್ನು ಕಟ್ಟಿಸುವುದು ಜನತೆಯ ಔದಾರ್ಯ ಮತ್ತು ದಾನ ಶೀಲತೆಯ ಸಂಕೇತವಾಗಿತ್ತು. ಇದು ಧಾರ್ಮಿಕ ಕಾರ್ಯವೆಂದು ಮೋಕ್ಷಸಾಧನೆಯ ಮಾರ್ಗವೆಂದು ಅಂದು ಭಾವಿಸಿದ್ದರು. ಕೆಲವೊಂದು ಸಲ ಕೆರೆಯ ಜೀರ್ಣೋದ್ಧಾರ ಮಾಡಿದ ಉಲ್ಲೇಖಗಳು ಶಾಸನಗಳಲ್ಲಿವೆ. ಗ್ರಾಮದ ಮುಖ್ಯಸ್ಥನಾದ ಗಾವುಂಡನ ಸಾನಿಧ್ಯದಲ್ಲಿ ಹಲವು ಸಾರ್ವಜನಿಕ ಜನೋಪಯೋಗಿ ಕಾರ್ಯಗಳು ನಡೆಯುತ್ತಿದ್ದವು. ಹೀಗೆ ಗಾವುಂಡರು ನಾಡಗೌಡರು ಮತ್ತು ಗೌಡರುಗಳು ಕೆರೆ, ಬಾವಿ ಮತ್ತು ದೇವಾಲಯಗಳನ್ನು ಕಟ್ಟಿಸಲು ಮುಂದಾಗಿ ದಾನ – ದತ್ತಿಗಳನ್ನು ನೀಡಿರುವ ಸಂಗತಿಗಳು ಶಾಸನಗಳಲ್ಲಿ ದಾಖಲಿರುವ ಅಂಶಗಳು ಕಂಡುಬರುತ್ತವೆ.

**ಆನೆಕೆರೆ (ಹಾನಗಲ್ ಕೆರೆ)**

ಹಾನಗಲ್ ಪಟ್ಟಣವು ಹಾವೇರಿಯಿಂದ ಪಶ್ಚಿಮಕ್ಕೆ 35 ಕಿ.ಮೀ ದೂರದಲ್ಲಿದ್ದು, ಇದು ಪ್ರಾಗೈತಿಹಾಸ ಕಾಲದಿಂದ ಜನವಸತಿ ಇರುವ ಪ್ರದೇಶವಾಗಿದೆ. ನಂತರ ವಿವಿಧ ರಾಜಮನೆತನಗಳ ಆಳ್ವಿಕೆಯಿಂದ ಪ್ರಮುಖ ಐತಿಹಾಸಿಕ ಸ್ಥಳವಾಗಿದೆ. ಈ ಪರಿಸರದಲ್ಲಿ ಹಲವು ಕೆರೆಗಳು, ನದಿ ಹಾಗೂ ಸಣ್ಣಪುಟ್ಟ ಹಳ್ಳಗಳೇ ಜಲಸಂಪನ್ಮೂಲಗಳಾಗಿವೆ. ಪ್ರಮುಖವಾಗಿ ಇಲ್ಲಿ ಆನೆಕೆರೆ, ಅಚ್ಚಕೆರೆ, ನಾಗವಳ್ಳಿಕೆರೆ, ಕಂಬಳಿಕೆರೆ ಎಂಬ 4 ಕೆರೆಗಳು ಹಾಗೂ ಕೆಂಪುಕಟ್ಟೆ, ಅಕ್ಕತಂಗಿಯರ ಕಟ್ಟೆ, ಮುಕ್ಕರ್ತಿ, ಕುಂಬಾರಗುಂಡಿ, ಮುಲ್ಲಾಗುಡಿ, ಕಂಚಿಗೇರಿ ಹೊಂಡ ಎಂಬ 6 ಕಟ್ಟೆಗಳಿವೆ. ಇವುಗಳಲ್ಲಿ ಐತಿಹಾಸಿಕವಾದ ಆನೆಕೆರೆಯ ಏರಿಯನ್ನು ಕಲ್ಲು ಮತ್ತು ಮಣ್ಣಿನಿಂದ ನಿರ್ಮಿಸಲಾಗಿದೆ. ಈ ಕೆರೆಗೆ 3 ತೂಬುಗಳಿದ್ದು ಸುಮಾರು 70.53 ಹೆಕ್ಟೇರ್‌ಗೆ ನೀರಾವರಿ ಒದಗಿಸಿದೆ. ಹಾನಗಲ್ ಮಲೆನಾಡು ಭಾಗದಲ್ಲಿರುವ ಅರೆ ಮಲೆನಾಡು ಪ್ರದೇಶ. ಇಲ್ಲಿ ವಾರ್ಷಿಕ ಸುಮಾರು 800 ಮಿ. ಮಿ. ನಿಂದ 1600 ಮಿ. ಮಿ. ನಷ್ಟು ಮಳೆ ಬೀಳುತ್ತದೆ. ಹಾನಗಲ್ ಪರಿಸರವು ಕೆರೆ – ಕಟ್ಟೆ ನಿರ್ಮಾಣಕ್ಕೆ ಯೋಗ್ಯವಾದ ಭೌಗೋಳಿಕ ಲಕ್ಷಣಗಳನ್ನು ಒದಗಿಸಿದೆ.

ಇಲ್ಲಿ ಕದಂಬರ ಆಡಳಿತ ಕಾಲದಲ್ಲಿ ನಿರ್ಮಾಣಗೊಂಡಿರುವ ಕೆಲವು ಕಟ್ಟಡಗಳಾದ ಉತ್ತರಿ, ಮಂಟಪ, ಕಚಗನ ಗರಡಿ, ಈಶ್ವರ, ರಾಮಲಿಂಗೇಶ್ವರ, ಬಿಲ್ಲೇಶ್ವರ, ತಾರಕೇಶ್ವರ, ಗಣಪತಿ, ಕಾಳಿಕಾ ದೇಗುಲಗಳು ಹಾಗೂ ಚೌಕೀದಾರರ ಕೊಠಡಿಗಳಲ್ಲಿರುವ ವಿಷ್ಣುವಿನ ಶಿಲ್ಪಗಳು ಅಂದಿನ ಶಿಲ್ಪಕಲೆಯ ಬೆಳವಣಿಗೆ ಮತ್ತು

ಐತಿಹಾಸಿಕತೆಯನ್ನು ನೆನಪಿಸುತ್ತಿವೆ. ಅಲ್ಲದೇ ಇಲ್ಲಿ ನಿರ್ಮಾಣವಾದ ಕೋಟೆ ದಿಬ್ಬ, ಆನೆಕೆರೆ ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದ್ದಾಗಿವೆ.

ಈ ಕೆರೆಯ ಚಾರಿತ್ರಿಕ ಅಂಶಗಳನ್ನು ನೋಡಿದಾಗ ಹೊಯ್ಸಳ ದೊರೆ ವಿಷ್ಣುವರ್ಧನ ತನ್ನ ಗಜಪಡೆಯೊಂದಿಗೆ ಕ್ರಿ.ಶ. 1118, 1122, 1135 ಹೀಗೆ ಮೂರು ಬಾರಿ ಕೆರೆ ಸಮೀಪದ ಕೋಟೆಯ ಮೇಲೆ ದಾಳಿ ಮಾಡಿದನು. ನಂತರ ಇಮ್ಮಡಿ ವೀರಬಲ್ಲಾಳನು ಪಾನುಗಲ್ಲಿನ ದಕ್ಷಿಣ ಭಾಗದಲ್ಲಿರುವ 'ಆನೆ' ತಟಾಕ ಬಳಿಯಲ್ಲಿ ತನ್ನ ಗಜಪಡೆಯೊಂದಿಗೆ ಬೀಡು ಬಿಟ್ಟು, ಹಾನಗಲ್ ಕೋಟೆಗೆ ಕ್ರಿ.ಶ. 1196 ರಲ್ಲಿ ಮುತ್ತಿಗೆ ಹಾಕಿದನು. ಈ ಕೋಟೆ ಕಾಳಗದಲ್ಲಿ ಸಾಹಣಿಯೊಬ್ಬನು ಮರಣ ಹೊಂದಿದ್ದನ್ನು ಶಾಸನ ತಿಳಿಸುತ್ತದೆ. ಗಜದಳದ ದೃಶ್ಯವಿರುವ 12ನೆಯ ಶತಮಾನದ ವೀರಗಲ್ಲೊಂದು ಕೋಟೆಭಾಗದಲ್ಲಿ ಕಂಡು ಬರುತ್ತದೆ.

ಈ ಕೆರೆಯ ಹತ್ತಿರ ನಡೆದ ಕೋಟೆ ಕಾಳಗದಲ್ಲಿ ಬಿಲ್ಲ ಮುನ್ನೊರ್ವರು ಕೋಟೆ ರಕ್ಷಣೆಗಾಗಿ ಹೋರಾಡಿರಬಹುದು. ಅವರು ಬಿಲ್ಲು ವಿದ್ಯೆಯಲ್ಲಿ ಪ್ರವೀಣರಾದ ಮಹಾನ್ ವೀರರಾಗಿದ್ದರು. ಶಾಸನವು ಅವರನ್ನು "ಜಗತೀತಾಳ ವಿಖ್ಯಾತಭುವನ ಪರಾಕ್ರಮೋನ್ನತರು, ಕಾಡಾನೆ ಮಲ್ಲರು, ಅಡವಿ ಕಂದಪರು, ದೋಟವಿಳಾಸರು, ಮೆರವುಗೆ ನಾಯರು ಚಲದಂಕರಾಮರು, ಸಾಹಸಶೌರ್ಯರು ರಣರಂಗಭೀಮರು, ನುಡೆದಂತೆ ಗಂಡರು, ಕದನ ಪ್ರಚಂಡರು, ಏಕಾಂಗ ವೀರರು, ಶರಣಾಗತ ವಜ್ರಪಂಜರು, ಬಿಲ್ಲೇಶ್ವರ ದೇವರ ಪಾದಾರಾಧಕರಪ್ಪ ಬಿಲ್ಲ ಮುನ್ನೊರ್ವರು" ಎಂದು ವರ್ಣಿಸಿದೆ.

**ಕುದುರೆ ಕೆರೆ (ಹಾನಗಲ್)**

ಹಾನಗಲ್‌ನಲ್ಲಿ ಮತ್ತೊಂದು ಪ್ರಮುಖ ಕೆರೆ 'ಕುದುರೆ ಕೆರೆ' ಯಾಗಿದೆ. ಇದು ಅಶ್ವ ಬಿಡುತ್ತಿದ್ದ ಮತ್ತು ಅಶ್ವಗಳನ್ನು ಮೈ ತೊಳೆಯುತ್ತಿದ್ದರೆನ್ನಲಾದ ಕೆರೆ ಇದು ಊರ ಎಡಗಡೆ ಪಕ್ಕದಲ್ಲಿದೆ. ಇಲ್ಲಿ ಕ್ರಿ.ಶ. 1119 ರಲ್ಲಿ ನಡೆದ ತುರು ಕಾಳಗದಲ್ಲಿ ಮೊಸಳೆಯ ಬಮ್ಮನೆಂಬ ಬಂಟನೋರ್ವನು ಮರಣ ಹೊಂದಿದ್ದನ್ನು ಶಾಸನ ಉಲ್ಲೇಖಿಸುತ್ತದೆ. ಈ ಕೆರೆಯ ಹತ್ತಿರದಲ್ಲಿ ಯುದ್ಧಭೂಮಿ ಇಲ್ಲವೆ ವೈಹಾಳಿಯ ಬಯಲು (ಆನೆ–ಕುದುರೆಗಳಿಗೆ ತರಬೇತು ಕೊಡುತ್ತಿದ್ದ ಸ್ಥಳ) ಇದ್ದಿರಬಹುದು.

ಹಾನಗಲ್‌ನ ಹಳೆಕೋಟೆ ಆಡೇರ ಹಿತ್ತಲದಲ್ಲಿನ ಶಾಸನದಲ್ಲಿ ಕ್ರಿ.ಶ. 1119 ರ ಸುಮಾರಿನಲ್ಲಿ ಹೊರಡಿಸಿದ ಈ ಕೆಳಗಿನ ಶಾಸನದಲ್ಲಿ ಕೆರೆಯ ಕುರಿತಾಗಿ ಶಾಸನದ 9 ರಿಂದ 12 ಸಾಲುಗಳು ಈ ಕೆಳಗಿನಂತೆ ಇವೆ.

- ಶ್ರೀಮತು ಸಕಳೇಶ್ವರ ಪಂಡಿ--- ಧಾರಪೂರ್ವಕ
- ವ --- ಯರಿ – ಗೆರೆಯ --- ದುಹಿ
- ಸಮ ಪಡುವಲು ಚಿ – (ಕ) ಟೇಶ್ವರದ

- -- ಯ ಬಡಗಲು ಬ (ಪ) --ಯಿಂ ತೆಂಕಲು ದು (ಗಾ)

ಈ ಮೇಲಿನ ಶಾಸನ ತ್ರಿಭುವನಶಕ್ತಿ ಪಂಡಿತ ಮತ್ತು ಅವನ ಸಹೋದರ ಸಕಲೇಶ್ವರ ಪಂಡಿತ ದೇವರಿಗೆ ತೆರಿಗೆ ರಿಯಾಯಿತಿ ಮತ್ತು ದಾನ ಕೊಟ್ಟ ಮಾಹಿತಿ ಹಾಗೂ ಕೆರೆಯ ಉಲ್ಲೇಖವನ್ನು ಸಹ ನೀಡುತ್ತದೆ. ಹಾನಗಲ್‌ನಲ್ಲಿ ಮತ್ತೊಂದು ಶಾಸನದಲ್ಲಿ ಕೆರೆಯ ಉಲ್ಲೇಖವಿರುವ 22 & 23 ರ ಸಾಲುಗಳನ್ನು ನೋಡಬಹುದು.

- ಬುಡಗಲ ಹುಣಿಸೆಯ ಬಳ್ಳಿಯ ಗದ್ದೆ ಮತ್ತಲೊಂದ ಮತ್ತಲು ಅದರಗೆವಿಯ ಕೆಳಗೆ ಮ
- --- ಡಣ ತುಂಬಿನ ಮೂಡಲು ಆಮಡ ಪಾರು (ರ) ಕೊಂತೇಶ್ವರವೇಹರೀ ಆಗ್ನೇಯದಲಿ ಅಣುವನಗದ್ದೆ ಕಂಡು

ಹಾನಗಲ್‌ನ ಮೊಟಭಾವಿ ಹಳೆಕೋರ್ಟ ಹತ್ತಿರ ಇರುವ ಈ ಮೇಲಿನ ಶಾಸನ ಕಲ್ಯಾಣ ಚಾಲುಕ್ಯರ ಆರನೇ ವಿಕ್ರಮಾದಿತ್ಯನ ಕ್ರಿ.ಶ. 1119 ರ ಕಾಲದ ಶಾಸನವಾಗಿದ್ದು, ಇದು ಹಾನಗಲ್ ಕದಂಬರ ತೈಲಪದೇವನ ಶಾಸನವಾಗಿದೆ. ಇದು ಬಿಲ್ಲೇಶ್ವರ ದೇವಸ್ಥಾನಕ್ಕೆ (ಪಾಂತಿಪುರ ಉಲ್ಲೇಖ) ಪ್ರಜೆಗಾಗಿ ಭೂದಾನ ಕೊಟ್ಟ ಬಗ್ಗೆ ಮತ್ತು ತೂಬಿನ ಬಗ್ಗೆ ಉಲ್ಲೇಖಿಸುತ್ತದೆ.

ಈ ಶಾಸನದ 13, 14 ಹಾಗೂ 21 ನೇ ಸಾಲುಗಳು ಈ ಕೆಳಗಿನಂತಿವೆ.

- ಸೆಟ್ಟಿಯರ್ಮೆ ಆಲಗೆರೆಯ ಎರೆದ ಸರಿ ಬಧಂಶಿ ಗೇರೆಯ ನಿರುವರಿಯಲ್ಲಿ ಬಿಟ್ಟ ಕಂಬಂ 25 । ಬಿಟ್ಟ
- ದಕ್ಷಿಣದ ಕೊಳದೊಳಗೆ ಬೆದಲ ಕಂಬ 50 ಯ --- ಮೂಡಲ್ ಬಮ್ಮಿ ಸೆಟ್ಟೆಯ ಕೆರೆಯ ಕೆಳಗೆ
- --- ದೇವಗ್ಗೆ ಬಿಟ್ಟ --- ಒಕ್ಕಲು ಕೊಳ್ಳ ---- ಮಧ್ಯಮ ದೇವಗೆ ಬಿಟ್ಟ ಒಕ್ಕಲು ।

ಈ ಮೇಲಿನ ಶಾಸನ ಹಾನಗಲ್ ಕದಂಬರ 2ನೇ ತೈಲಪನ ಕಾಲದ ಶಾಸನವಾಗಿದೆ. ಆಲಕೆರೆಯನ್ನು ಹಾಗೂ ಬಧಂಶಿ ಕೆರೆಯ ನೀರಾವರಿ ಭೂಮಿ ತಿಳಿಸುತ್ತಾ, ಅಲ್ಲಿ ಬಿಟ್ಟ ಕಂಬ 25 ಭೂ-ತೆರಿಗೆ ಕುರಿತು ಹಾಗೆಯೇ ಇನ್ನೊಂದು ಕೆರೆಯಾದ ಪೂರ್ವ ಭಾಗದಲ್ಲಿ ಸೆಟ್ಟಿಯ ಕೆರೆಯನ್ನು ಉಲ್ಲೇಖಿಸುತ್ತದೆ. ಅಲ್ಲದೇ ದೇವರಿಗೆ ಬಿಟ್ಟಿರುವ ಒಕ್ಕಲು, ಕೊಳ್ಳ, ಬಿಟ್ಟಿ ತೆರಿಗೆ ಮಾಹಿತಿ ತಿಳಿಸುತ್ತದೆ.

ಹಾನಗಲ್‌ನ ಕೃಷ್ಣಭಟ್ಟ ಎಡಗಣಿ ಮನೆಮುಂದೆ ಇರುವ ಹಾನಗಲ್ ಕದಂಬರ ತೈಲಪದೇವನ ಕ್ರಿ.ಶ. 1120-21 ರ ಶಾಸನವು ದಾನಕೊಟ್ಟ ಮಾಹಿತಿ ತಿಳಿಸುತ್ತಾ, ಕೆರೆಯ ಉಲ್ಲೇಖ ಹಾಗೂ ಸೀಮೆ ಮತ್ತು ದಿಕ್ಕುಗಳನ್ನು ಸೂಚಿಸುತ್ತದೆ.

ಶಾಸನದ 14 & 15 ಸಾಲುಗಳು ಈ ಕೆಳಗಿನಂತಿವೆ.

- ---- ಮ್ಮ ಅಯಿವತ್ತು ಅರಸಿಯ ಹಾ ---
- --- ವರ ಕೇರಿಗೆ ಸೀಮೆ ಆಗ್ನೇಯ (ಕೆ) ಮೂ –

ಹಾನಗಲ್‌ನ ಹಾಲಹನುಮಂತ ದೇವಸ್ಥಾನದ ಮುಂದೆ ಇರುವ ಇನ್ನೊಂದು ಶಾಸನದ 13, 14, 21 ಹಾಗೂ 22 ರ ಸಾಲುಗಳಲ್ಲಿ ಕೆರೆಯ ಉಲ್ಲೇಖವನ್ನು ನೋಡಬಹುದು.

- ಗದ್ದೆಯ ಸೀಮೆ ಆಲಂಗೇರೆಯ --- ದರಿ (ಯ) ಲ್ಲಿ ಬಿಟ್ಟ ಕಮ್ಮ 2 –
- ದಕ್ಷಿಣದ ಕೊಳದೊಳಗೆ ಬೆದ್ದಲ ಕಮ್ಮ ---- ಮ್ಮಿಸೆಟ್ಟಿಯ ಕೆರೆಯ ಕೆಳಗೆ
- ಕ್ಕಲು 22 ಮನೆದೆರೆಯವರು ದೇವಗೆ ಬಿಟ್ಟ ತೆರೆ ಒಕ್ಕಲು 1

  ಕೊಟ್ಟಗೆದರೆಯವರು ದೇವ (ಗ್ಗೆ) ಬಿಟ್ಟ ಒಕ್ಕಲು
- ಹೆಗದರೆಯವರು ಧರ್ಮಕ್ಕೆ ದೇವಗೆ ಬಿಟ್ಟ ತೇರೆಯೊಕ್ಕಲು 1

  ಇಂತೀ ಧರ್ಮಮನಾರೊಬ್ಬರು ತಪ್ಪದೆ ಪು –

ಇದು ಕಲ್ಯಾಣ ಚಾಲುಕ್ಯರ ಆರನೇ ವಿಕ್ರಮಾದಿತ್ಯನ ಕ್ರಿ.ಶ. 1121 ರ ಶಾಸನವಾಗಿದೆ. ಹಾನಗಲ್ ಕದಂಬರ ತೈಲಪದೇವನ ಶಾಸನದಲ್ಲಿ ಎಡವಲ–70 ನ್ನು ಸೂಚಿಸುತ್ತಾ ಭೂ–ದಾನ ಹಾಗೂ ಸೋಮೇಶ್ವರ ದೇವಸ್ಥಾನ ನಿರ್ಮಾಣ ಮಾಡುವ ಮಾಹಿತಿ ತಿಳಿಸುತ್ತಾ, ಆಲಂಗೇರೆಯ ಉಲ್ಲೇಖ ಜೊತೆಗೆ ಮಿಸಟ್ಟಿಯ ಕೆರೆಯ ಕೆಳಗೆ ಬಿಟ್ಟ ದೇವರಿಗೆ ತೆರೆ ಒಕ್ಕಲನ್ನು ಧರ್ಮಕ್ಕಾಗಿ ತೆರಿ ಒಕ್ಕಲನ್ನು ಬಿಟ್ಟ ದಾನದ ಕುರಿತಾಗಿ ಈ ಶಾಸನ ಮೇಲಿನಂತೆ ವಿವರಿಸುತ್ತದೆ.

**ಬಾಳಂಬೀಡು ಕೆರೆ:**

ಬಾಳಂಬೀಡು ಶಾಸನವು ಕಲ್ಯಾಣ ಚಾಲುಕ್ಯರ 6ನೇ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು, ಕ್ರಿ.ಶ. 1118 ರ ಇದು ಸ್ಥಳೀಯ ಹಾನಗಲ್ ಕದಂಬರ ತೈಲದೇವನ ಶಾಸನವಾಗಿದೆ. ಈ ಉಲ್ಲೇಖಗಳನ್ನು ಶಾಸನದ 57, 58, 59 ಹಾಗೂ 60 ರಲ್ಲಿ ಇರುವ ಸಾಲುಗಳಲ್ಲಿ ನೋಡಬಹುದು.

- ಮಾಟಕೂಟಪ್ರಾಸಾದಾನೇಕ ಕರ್ಮಾಂತರಕೆಂದು ಆ ಕೆಜೆಯ ಕೆಳಗೆ ತುಂಬಿನ ಹೊರೆಯಲು ಬಿಟ ಗರ್ದೆ ಮತ್ತು 1 ಮತ್ತು
- (ಬಿಟ್ಟ) ಗೊಂಡದ ಬಳಿಯ ಹಕಲು ಮತ್ತು 1 ಮತ್ತಂ ಆ ಕೆಜೆಯ ಕೆಳಗೆ ದೇವರಿಗೆ ಕೊಟ್ಟ ತೋಂಟದ ಮರ 500 ಮ
- ತ್ತಂ ಅಕ್ಕಿವಳ್ಳಿಯ ಕೆರೆ ಅಣಂತರ ----ರು ಬಿಟ್ಟಧರ್ಮನೂ ಜಿ ಹೇರೆಂಗ ಮೂರು ದೇರೆನ ಸುಂಕದ ಬಿ---

- ಟ್ಟರು ಮತ್ತು ತಂಬುಲಿಗ ಸಾಸಿರ್ವ --- ದೇವಗೆ ಬಿಟ್ಟ ಧರ್ಮ ಹೊಂಗೆ 2 ॥ ಮತ್ತಂ ದೇವರ ನಂದಾದೀಊಗೆಗಂ ಮಾನೆಗ್ನಿಯಂ

ಈ ಮೇಲಿನ ಶಾಸನವು ಭೂಮಿ ಮತ್ತು ಉದ್ಯಾನವನವನ್ನು ಉಲ್ಲೇಖಿಸುತ್ತಾ ತಿಳಿಸುತ್ತಾ ಬಳಾರಿಬೀಡಿನಲ್ಲಿ ಬರ್ಮಳಗಾವುಂಡನ ಆಡಳಿತ ನಡೆಸುತ್ತಿದ್ದ ಬಗ್ಗೆ ತಿಳಿಸುತ್ತದೆ. ಅಲ್ಲದೇ 1000 ಜನ ತಂಬಲಿಗರ ಎಣ್ಣೆ ದಾನ ಮತ್ತು ಕೆಱೆ ತುಂಬು ಅಲ್ಲಿಯೂ ದೇವರಿಗೆ ಬಿಟ್ಟ ಗದ್ದೆ, ತೋಟ ಭೂ-ದಾನ ಕುರಿತು ಉಲ್ಲೇಖಿಸುತ್ತದೆ.

ಬಾಳಂಬೀಡಿನ ಇನ್ನೊಂದು ಶಾಸನದ 49, 50 ಹಾಗೂ 51 ನೇ ಸಾಲುಗಳು ಈ ಕೆಳಗಿನಂತೆ ಉಲ್ಲೇಖಿಸುತ್ತವೆ.

- ಹಳ್ಳದ ಬಳಿಯ ಹಕ್ಕಲು ಮತ್ತರೊಂದು ಅದರೊಳಗೆ ದೇವಗೆ ಹಕ್ಕಲು ಕಮ್ಮ 60 ಮತ್ತು ತಪೋದನಗೆ ಕೊಟ್ಟ ಹಕ್ಕಲು
- ಕಮ್ಮ 40 ಅಸ್ತು ಹಕ್ಕಲು ಮತ್ತರೊಂದು ಮತ್ತ ಅಂಕಲಗೆರೆಯಿ ಕೆಳಗೆ ಆ ಇನೂರು ಮರದ ತೋಂಟ ಮತ್ತ (0) ದೇವರ
- ನಂದಾದೀವಿಗೆಗೆ ಮಾನೆಣ್ಣೆ ಕೊಳಗಳಿಂಡಿ ಬಿಟ್ಟ ಗಾಣ 1 ಮತ್ತಂ ತಂಬುಲಿಗ ಸಾಸಿರ್ವರಿದ್ದು ದೇವಗೆ ಹೇಮಿಂಗೊಂದು ವೀಸಮಂ

6ನೇ ವಿಕ್ರಮಾದಿತ್ಯನ ಕಾಲದ ಕ್ರಿ.ಶ. 1123 ರ ಶಾಸನವು ಮಹಾಮಂಡಲೇಶ್ವರನಾದ ಹಾನಗಲ್ ಕದಂಬರ ತೈಲಪದೇವನ ಶಾಸನವಾಗಿದ್ದು, ಇದರಲ್ಲಿ ದೇವರ ಪೂಜೆಗೆ ಭೂ-ದಾನ ವಿವರ ಹಾಗೂ ದೇವಸ್ಥಾನ ನಿರ್ಮಾಣಕ್ಕಾಗಿ ಬಮ್ಮಗಾವುಂಡ ದಾನ ಮಾಡಿದ ಉಲ್ಲೇಖವಿದೆ. ಅಲ್ಲದೇ ಅಂಕಲಕೆರೆಯ ಕೆಳಗೆ 200 ಮರಗಳಿರುವ ತೋಟ, ಹಳ್ಳದ ಬಳಿ ಇರುವ ಹಕ್ಕಲ ಕಮ್ಮ 60 ಹಾಗೂ ಹಕ್ಕಲ ಕಮ್ಮ 40 ಭೂಮಿಯನ್ನು ದೇವರಿಗೆ ದಾನವಾಗಿ ಕೊಟ್ಟಿರುವ ಬಗ್ಗೆ ತಿಳಿಸುತ್ತದೆ.

**ತಿಳುವಳ್ಳಿ ಕೆರೆ:**

ತಿಳುವಳ್ಳಿಯ ಅಗಸಿಯಲ್ಲಿರುವ ಕ್ರಿ.ಶ. 1072 ರ ಕಾಲದ ಶಾಸನ ಹಲವು ದಾನ ಮತ್ತು ತೆರಿಗೆ, ಭೂದಾನ ಕುರಿತು ಹಾಗೂ ತಿಳುವಳ್ಳಿ ಕೆರೆ ಉಲ್ಲೇಖದ ಜೊತೆಗೆ ಅದನ್ನು ಕಲ್ಲಿನಿಂದ ಏರಿ ನಿರ್ಮಾಣ ಮಾಡಿದ ಕುರಿತು ತಿಳಿಸುತ್ತದೆ. ಈ ಮೇಲಿನ ಉಲ್ಲೇಖಗಳನ್ನು ಶಾಸನದ 13, 14, 23, 24, 32 & 33 ಸಾಲುಗಳಲ್ಲಿ ಕಾಣಬಹುದು.

- ಪ್ಪ ಬಂಟ ಸಾಸಿರ್ವನ್ನೆರೆದು ಪಿರಿಯ ಕೆಱೆಯ ಕಲ್ಕಟ್ಟಂಗೆ
- ರಡು ಹಣದ ದೆ ಮೊದಲಾಗೆ ಏರಿಶಕಾಳಲೊಂದು ಹಣ
- ಪ್ರಮುಖ ಕರಣಂಗಳ್ ತಿಳವಳ್ಳಿ ಟಾಣೆಯದಲು ಕೆಱೆ
- ಗೆ ಪೆಜ್ಜಂಕದಲು ಯೆರಡು ಲಕ್ಕವ (0) ಡಕೆಯ ಬಿಟ್ಟರ ॥

- ಸುಂಕಮಂ ಕೆರೆಯ ಕಲುಕಟ್ಟಿಂಗೆ ಬಿಟ್ಟ ಶ್ರೀ ಬಂಟ ಸಾಸಿರ್ವ
- ರ (ರು)ಂ ಬಾರಿಕರಿಗೆ ಮನೆದೇರೆಬಿಟ್ಟಬೆಸ ಪೂಳ್ವೆ ಮೊದಲಾಗೆ ಸರ್ವಮಾ

ಈ ಮೇಲಿನ ಶಾಸನ ಅವಲೋಕ ಮಾಡಿದರೆ ಈ ಕೆರೆಯನ್ನು ಬಂಟ ಸಾಸಿರ್ವರ್ ಎಂಬ ಶ್ರೇಣಿ (ಸಂಘ) ಯವರು ಕೆರೆಯ ಏರಿಯ ಕಲ್ಲು ಕಟ್ಟಡ ನಿರ್ಮಾಣ ಮಾಡಲಿಕ್ಕೆ ಹಣವನ್ನು ಕೊಟ್ಟರು ಎಂದಿದೆ. ಉಳಿದಂತೆ ಈ ಶಾಸನದಲ್ಲಿ ಪೆರ್ಗಡೆಯಾದ ದಣ್ಣನಾಯಕನಪ್ಪ, ನಾಗವರ್ಮಯ್ಯ, ಕುಪಟೂರಿನ ಕೆಲವರು ಹಿರಿಯ ಕೆರೆಗೆ 2 ಲಕ್ಷ ರೂ (2 ಲಕ್ಕವಡಕೆಯ) ತೆರಿಗೆ ಕೊಟ್ಟರು. ಅಲ್ಲದೇ ಬನವಾಸಿ–12000 ಪೆರ್ಗಡೆ ಮಾದಿರಾಜನ ಮತ್ತು ಮಾಳಪಯ್ಯ ಇತರ ಪ್ರಮುಖರು ಸಹ ಕೆರೆಗೆ (ಪೆಜ್ಜುಂಕ) ತೆರಿಗೆ ಮತ್ತು (ಲಕ್ಕವ) ಎಂಬ ಎರಡು ತೆರಿಗೆ ಕೊಟ್ಟರು. ಹೀಗೆ ಹಿರಿಯ ಕೆರೆಗೆ ಸುಂಕ ಬಿಟ್ಟ ಕಲುಕಟ್ಟಡ ನಿರ್ಮಿಸಿ ಊರಿನ ಹಿರಿಯರು ಸೇರಿ ಬಾರಿಕರಿಗೆ (ಮನೆದೆರಿ) ಎಂಬ ತೆರಿಗೆ ಬಿಟ್ಟರು ಎಂಬ ಇತ್ಯಾದಿ ಕೆರೆಯ ಮಾಹಿತಿ ತಿಳಿಸುತ್ತದೆ.

ತಿಳುವಳಿಯ ಕಲ್ಯಾಣ ಮಂಟಪದ ಹತ್ತಿರವಿರುವ ಶಾಸನವೊಂದರ 21, 22 & 35 ಸಾಲಿನಲ್ಲಿ ಈ ಕೆಳಗಿನಂತೆ ಕೆರೆಗೆ ನೀಡಿದ ದಾನದ ಬಗ್ಗೆ ಉಲ್ಲೇಖವಿದೆ.

- ಗಿಯ ಪೊಲದ ಪುಣಿಸೆ ಕೊಳದ ಕೆಳಗೆ ವಿಷ್ಣುವರ್ಧನನ ಕೋಲಲು ಸತ್ತಕ್ಕೆ ಬಿ –
- ಟ್ಟ ಗರ್ದೆ ಕಮ್ಮಂ 10 ಆ ಪುಣ್ಯಪುರುಷನ ತಮ್ಮಂ ಕೇಶವದೇವಂ ಸಾಸಿರ್ವರಿಗೆ ಷಾ –
- ಲಪೊ (ಲ+) ದಲು ಎರಡು ಬಳ್ಳಿಯಂ ಈಳಿಯೆಗದ್ದೆ ಮತ್ತಲು 1 ಈ ಧರ್ಮಮಂ

ಕಲ್ಯಾಣ ಚಾಲುಕ್ಯರ 3ನೇ ಸೋಮೇಶ್ವರನ ಕಾಲದ ಕ್ರಿ.ಶ. 1129 ರ ಮೇಲಿನ ಶಾಸನವು ಮಹಾಮಂಡಳೇಶ್ವರನಾದ ಹಾನಗಲ್ ಕದಂಬರ ತೈಲಪದೇವನಿಗೆ ಸಂಬಂಧಿಸಿದ್ದು, ತಿಳುವಳ್ಳಿಯ ಟಕಿಮಯ್ಯ ಅಭಿನವ ಶಂಕರದೇವರಿಗೆ ಭೂದಾನ, ಹಣ ಮತ್ತು ತೆರಿಗೆಯನ್ನು ವೈಯಕ್ತಿಕವಾಗಿ ಕೊಟ್ಟ ಉಲ್ಲೇಖದ ಜೊತೆಗೆ ಕೆರೆಯ ಉಲ್ಲೇಖವಿದೆ. ಅಲ್ಲದೇ ಇಲ್ಲಿ ಹುಣಸೆ ಕೊಳದ ಕೆಳಗೆ ಗದ್ದೆ ಕಮ್ಮ 10, ಎರಡು ಬಳ್ಳಿಯ ಈಳಿಯಗದ್ದೆ ದತ್ತಿ ಬಿಟ್ಟ ಕುರಿತು ಶಾಸನ ಉಲ್ಲೇಖಿಸುತ್ತದೆ.

ತಿಳುವಳ್ಳಿಯ ಶಾಂತೇಶ್ವರ ದೇವಾಲಯದಲ್ಲಿರುವ ಶಾಸನದ 31 ಹಾಗೂ 32ನೇ ಸಾಲುಗಳಲ್ಲಿ ಕೆರೆ (ತಟಾಕ)ಯ ಉಲ್ಲೇಖವನ್ನು ಕಾಣಬಹುದು.

- ಹಾರದವೊಲು ಲೋಕಯ್ಯತುಕರುಷವೆನಿಸು ನಾಗರಖಂಡ ॥ ನಾನಾಧಾನ್ಯ

  ಫಖೋಪಭೋಗ ಸುಭಗಂ ಪೂಗೀವನಾಲಂಕೃತಂ ಮಾ ನಾತೀತ

ತಟಾಕಸಂಕುಳಮಿಳ

- ತುಕೂಲ್ಲಾಸಸಮ್ಮೃದ್ಧಾಕರಂ ಭೂನಾರೀಕುಚ ಭೂಷಣ ಮಧುಕರೋದ್ಗಾನಾ ಧ್ವವನ್ಯಾ ಮೃತಂ ವೇನಂ ಸಾಗರಖಂಡದೇಶಮಸೆಗುಂ ವಿಶ್ವಂಭರಾ ಭಾಗದೊಳು ॥ ಶ್ರೀ

ಮೇಲಿನ ಶಾಸನ 2ನೇ ಸಿಂಗಣನ ಕ್ರಿ.ಶ. 1239 ರ ಶಾಸನವಾಗಿದ್ದು ಇಕ್ಕೇರಿ ಚಕ್ರವರ್ತಿಗೆ ಒಳಪಟ್ಟ ನಾಗರಖಂಡ-70 ರ ಆಡಳಿತವನ್ನು ಬೊಮ್ಮಿದೇವನು ಮಾಡುತ್ತಿದ್ದನೆಂದು ಹಾಗೂ ಅಗ್ರಹಾರದ ಮಹಾಜರೊಂದಿಗೆ ಪ್ರಬಾಸ, ಗೋವಿಂದಾಸರ ಉಲ್ಲೇಖಗಳಿವೆ. ಅಲ್ಲದೇ ಕೆರೆಯ (ತಟಾಕ) ಉಲ್ಲೇಖಗಳಿವೆ.

**ಕಲ್ಕೇರೆ ಕೆರೆ:**

- ಬೇಗೇರಿಯಲ್ಕೇರಿಯ ಬೀಡಿನ ಕ ಕಾಂಚಿಸೆಟ್ಟಿಯ ಕೆರೆಯ ಸೋಮೇಶ್ವರ ದೇವಗ್ಗೆ ನಿವೇದ್ಯಕಂ

ಮೇಲಿನ ಕಲ್ಕೇರಿ ಶಾಸನದ 18ನೇ ಸಾಲಿನಲ್ಲಿ ಕೆರೆ ಸಂಬಂಧಿ ಮಾಹಿತಿಯಿದೆ. ಈ ಶಾಸನ ಕಲ್ಯಾಣ ಚಾಲುಕ್ಯರ ಮೊದಲನೇ ಸೋಮೇಶ್ವರನ ಕ್ರಿ.ಶ. 1053 ರ ಶಾಸನವಾಗಿದ್ದು, ಬೇಗೆರಿ ಸೀಮೆಯಲ್ಲಿ ಕಾಂಚಿಸೆಟ್ಟಿಯು ಕೆರೆಯ ಸಮೀಪ ಇರುವ ಭೂಮಿಯನ್ನು ಸೋಮೇಶ್ವರ ದೇವರಿಗೆ ನೈವೇದ್ಯಕ್ಕೆ ದತ್ತಿ ಬಿಟ್ಟ ಮಾಹಿತಿ ತಿಳಿಸುತ್ತದೆ.

- ರಾಜಪಸಮಾಧಿ ಸಂಪನ್ನರಪ್ಪ ಶ್ರೀಮತು ಪಶುಪತಿದೇವರ ಕಾಲಂಕಟ್ಟೆ ಧಾರಾಪೂರ್ವಕದಿಂ ಬೇಂಗೇರಿಯ ಕೆರೆಯ ಕೆಳಗೆ ಬಿಟ್ಟ ಗದ್ದೆ ಮತ್ತರೊಂದು ಕೆಲೆಯೂ –

- ರ ಬಟ್ಟೆಯಿಂ ಪಡುವ ಬಿಟ್ಟ ಬೆದ್ದಲೆ ಮತ್ತಲೆರಡು ಕೆರೆಯ ಕಳಗಣ ತುಂಬಿನ ಮೊದಲಡಕೆಯಗ್ಗ

ಈ ಮೇಲಿನ ಉಲ್ಲೇಖ ಕಲ್ಯಾಣ ಚಾಲುಕ್ಯರ ಮೊದಲನೇ ಸೋಮೇಶ್ವರನ ಕ್ರಿ.ಶ. 1055 ರ ಕಲ್ಕೇರಿ ಶಾಸನದಲ್ಲಿ ಬಮ್ಮಗಾವುಂಡ ಪೆರ್ಗಡೆಯಾದ ನಾರಣಯ್ಯ ಮತ್ತು ಬಾಸವೂರ-140 ರ ಮುಖ್ಯಸ್ಥ ಮಲ್ಲರಾಸನಾಗಿದ್ದನೆಂದಿದೆ. ಇಲ್ಲಿ ಪಸುಪತಿದೇವರ ಉಲ್ಲೇಖವಿದ್ದು, ಶಾಸನದ 11 ಹಾಗೂ 12 ನೇ ಸಾಲಿನಲ್ಲಿ ಬೆಂಗೇರಿಯ ಕೆರೆಯ ಕೆಳಗೆ ಪಶುಪತಿದೇವರಿಗೆ ಒಂದು ಮತ್ತರು ಮತ್ತು ಕೆಲೆಯೂರ ಪಶ್ಚಿಮಕ್ಕೆ ಎರಡು ಮತ್ತರು ಬೆದ್ದಲೆ ಭೂಮಿಯನ್ನು ದಾನ ಬಿಟ್ಟ ಉಲ್ಲೇಖವಿದೆ.

- ಕೂಡಿದ ಪುಣ್ಯದಿನದಲು ಸಾಸಿರ್ವೆಗ್ಗೆ ಪಾದಪೂಜೆಯ ಕೊಟ್ಟ ತನ್ನ ಪಡೆಗೆರೆ
- ಯ ಕೆಯ್ಯೊಳಗೆ ವಿಷ್ಣುವರ್ಧನನ ಗಳೆಯಲ್ಲೈ 50 ಮತ್ತು ಕಮ್ಮಕೆಯ್ಯಸ

ತಿಳುವಳ್ಳಿ ಚಾವಡಿಯಲ್ಲಿರುವ ಕಲ್ಯಾಣ ಚಾಲುಕ್ಯರ 3ನೇ ಸೋಮೇಶ್ವರನ

ಕಾಲದ ಕ್ರಿ.ಶ. 1155 ರ ಶಾಸನ ಸಿಂಗಣ ಸೇದಿ ಅರಸನಿಗೆ ಸಂಬಂಧಿಸಿದ್ದಾಗಿದೆ. ಈ ಮೇಲಿನ ಶಾಸನದ 15 ಮತ್ತು 16 ನೇ ಸಾಲಿನಲ್ಲಿ ಪಡೆಕೆರೆಯ ಹತ್ತಿರ 50 ಕಮ್ಮ (ಭೂಮಿ)ಯನ್ನು ದಾನ ಮಾಡಿದ ಕುರಿತು ಹಾಗೂ ಕೆರೆ ಉಲ್ಲೇಖದ ಜೊತೆಗೆ ಈ ಶಾಸನದಲ್ಲಿ ತಿಳುವಳ್ಳಿ 1000 ಜನರ ಅಗ್ರಹಾರವಾಗಿತ್ತು ಎಂದು ಉಲ್ಲೇಖಿಸಿದೆ. ಸರ್ವಭಾದೆ ಪರಿಹಾರಕ್ಕಾಗಿ ಬಡಗಣ ಭಾಗದಲ್ಲಿ ಅಲ್ಲಿಯೇ ಹೆಬ್ಬೇರಿ ಸಮೀಪ ದೊಡ್ಡ ಏತದ ಹತ್ತಿರ (ದೊಡ್ಡ ಚಾನಲ್) ಈ ಭೂಮಿ ಇರುವುದಾಗಿ ಈ ಶಾಸನ ತಿಳಿಸುತ್ತದೆ.

- ಕಲುಕೆರೆಯ ಹಿರಿಯ ಕೆರೆಯ ಕೆಳಗೆ ಗದ್ದೆ ಕಂಬ 2 (0) ತ್ತು.
- ಹುಲ್ಲವಾಳಲು ಗದ್ದೆ ಕಂಬ 10 ತ್ತು ಹಕ್ಕಲು ಕಂಬ 20 ತ್ತು
- (ಪಡು) ವಣ ಗದ್ದೆ ಕಮ್ಮ 10 ಹೆಗೆರೆಯ ಬಡಗ
- ಣ ಕೋಡಿಯಲ್ಲಿ ಬಸುಕಮ್ಮ 20 @ ಸ್ವಸ್ತಿ ಶ್ರೀ ಜೇ

ಮೇಲಿನ ಶಾಸನ 2ನೇ ಬಲ್ಲಾಳನ ಕ್ರಿ.ಶ. 1207 ರ ಕಾಲದ್ದಾಗಿದೆ. ಇದರಲ್ಲಿ 21, 22, 29 & 30 ರ ಸಾಲುಗಳಲ್ಲಿ ಹರಿಯಮ ಶೆಟ್ಟಿ ಹೆಸರಿದ್ದು, ಕಲ್ಕೇರಿಯ ನಾಳ್ಪ್ರಭು ಶೆಟ್ಟಿಯಾಗಿದ್ದನು. ಇಲ್ಲಿ ಮುಖ್ಯವಾಗಿ ಸ್ವಂಬೂ ಸೋಮನಾಥ ದೇವರಿಗೆ ಭೂದಾನ ಮತ್ತು ಕೆರೆ ಉಲ್ಲೇಖವಿದೆ. ದೇವಸ್ಥಾನ ಜೀರ್ಣೋದ್ಧಾರ ಮತ್ತು ಬ್ರಾಹ್ಮಣರಿಗೆ ಹಿರಿಯ ಕೆರೆಯ ಕೆಳಗೆ ಗದ್ದೆ ಕಂಬ 20 ಮತ್ತು ಹೆಗ್ಗೇರಿಯ ಬಡಗಣ (ಪೂರ್ವ) ಕೋಡಿಯ ಕಡೆ ಕಮ್ಮ 20 ಭೂಮಿ ಬಿಡಲಾಗಿದೆ. ಜೊತೆಗೆ ಮತ್ತಿಹಳ್ಳಿಯ ಹೆಗ್ಗೇರಿಯ ಬಡಗಣ ಕೋಡಿಯ ಸಂಕಿನ ಏರಿ ಕೆಳಗೆ ಕಮ್ಮ 10 & ಹಕ್ಕಲ ಕಮ್ಮ ಭೂಮಿಯನ್ನು ಬ್ರಾಹ್ಮಣರ ಆಹಾರಕ್ಕೆ ದೇವಸ್ಥಾನ ಜೀರ್ಣೋದ್ಧಾರಕ್ಕೆ ಬಿಡಲಾಗಿದೆ ಎಂದು ಉಲ್ಲೇಖಿಸಿದೆ.

**ಆಡೂರು ಕೆರೆ:**

ಕಲ್ಯಾಣ ಚಾಲುಕ್ಯರ 1ನೇ ಸೋಮೇಶ್ವರನ ಕ್ರಿ.ಶ. 1044 ರ ಕಾಲದ ಹಾನಗಲ್ ಕದಂಬರ ದಂಡನಾಯಕ ಈಚಯ್ಯಭಟ್ಟನ ಶಾಸನದಲ್ಲಿ ಕಲ್ಲೇಶ್ವರ ದೇವರಿಗೆ ಭೂದಾನ ನೀಡಿದ ಮಾಹಿತಿ ಇದೆ. ಈ ಶಾಸನದಲ್ಲಿ ಸಾಂತಳಿಗೆ – 1000 ದ ಪೆರ್ಗಡೆ ಮಾದಿಮಯ್ಯ ವಾಮದೇವರ ಮಗ ನಾಲೆಗರಸ್ಯೆ (2) ವಯ್ಯನ, ಗೊಜ್ಜಿಯಜ್ಜೆ ಇವರ ಉಲ್ಲೇಖವಿದೆ. ಅಲ್ಲದೇ ಜನಶಂಕರ ದೇಗುಲಕ್ಕೆ ತೋಟ, ಮನೆ, ದತ್ತಿ ಬಿಟ್ಟ ವಿವರಗಳಿವೆ. ಹಾಗೆಯೇ ಆಡೂರಿನಲ್ಲಿರುವ ಕ್ರಿ.ಶ. 750 ರ ಕಾಲದ ಶಾಸನವು ದೇವಸ್ಥಾನದ ಅರ್ಚಕರಿಗೆ ಕೆರೆಯ ಕೆಳಗಿನ ಭೂಮಿಯನ್ನು ದತ್ತಿಯಾಗಿ ಕೊಟ್ಟ ವಿಚಾರವನ್ನು ಪ್ರಸ್ತಾಪಿಸುತ್ತದೆ. 2ನೇ ಜಯಸಿಂಹನ ಕ್ರಿ.ಶ. 1034 ರ ಕಾಲದ ಶಾಸನದಲ್ಲಿ ಕೆರೆಯ ಹತ್ತಿರವಿರುವ ತೋಟದ ಭೂಮಿಯನ್ನು ದಾನ ಮಾಡಿದ ಉಲ್ಲೇಖವಿದೆ.

- ಮುಣ್ಣಂ ಕಾಳೇಶ್ವರದೇವಗೆ ನಿವೇದ್ಯಕ್ಕೆ ಪಿರಿಯ ಕೆರೆ (ಯ) ತುಂಬಿದಪ್ಪಿಲರಿ –
- ರಿಂಗಂ ಪಾಡುವಂಗಂ ಗದ್ದೆ (ಅ) ಮತ್ತು ರಾ ಕೆರೆಯ ... ಟಕೋದಿ..

ರಿ ಎರೆಯ .... ಪಾವಂಗ

ಶಾಸನದ ಮೇಲಿನ ಸಾಲುಗಳು ಕಾಳೇಶ್ವರ ದೇವರಿಗೆ ನೈವೇದ್ಯ ಮತ್ತು ಪೂಜೆಗಾಗಿ ಹಿರಿಯ ಕೆರೆಯ ಕೆಳಗೆ ಭೂದಾನ ಕೊಟ್ಟ ಮಾಹಿತಿಯನ್ನು ಉಲ್ಲೇಖಿಸುತ್ತವೆ.

- ತರ ಕಾಲಂ ಕರ್ಚಿ ದಾರಾಪೂರ್ವಕಂ ಮಾಡಿ ಪೆಗ್ಗೆರೆಯ ಕೆಳಗೆ ಪನ್ನವ
- ಣ ದೋಟದಿಂ ಮೂಡಲ್ ಬಿಟ್ಟ ಅಡಕೆಯ ಮರಂ ಮೂನೂಮಿ ಇಂತೀ

ಮೇಲಿನ ಸಾಲುಗಳು ಕ್ರಿ.ಶ. 1067 ರ ಆಡೂರ ಶಾಸನದ 25 & 26 ನೇ ಸಾಲುಗಳಾಗಿದ್ದು, ದೊಡ್ಡ ಕೆರೆಯ ಕೆಳಗೆ ಅಡಕೆಯ ಮರದ ತೋಟವನ್ನು ಕಲ್ಲೇಶ್ವರ ದೇವಸ್ಥಾನಕ್ಕೆ ಅಲ್ಲಿಯ ಬಾಲಚಂದ್ರ ಪಂಡಿತರಿಗೆ ಕೊಟ್ಟ ಉಲ್ಲೇಖವನ್ನು ತಿಳಿಸುತ್ತವೆ.

**ಉಪಸಂಹಾರ**

ಪ್ರಪಂಚದ ವಿವಿಧ ನಾಗರೀಕತೆಗಳನ್ನು ಅಧ್ಯಯನ ಮಾಡಿದಾಗ, ಅವೆಲ್ಲವುಗಳು ವಿಪುಲವಾಗಿ ನೀರನ್ನೊದಗಿಸುವ ನದಿಗಳ ದಡದಲ್ಲಿಯೇ ಬೆಳೆದಿದ್ದು ಗೊತ್ತಾಗುತ್ತದೆ. ಇದರಿಂದ ಮಾನವನ ನಾಗರಿಕತೆಯ ಜೀವನ ನೀರು ಮತ್ತು ವ್ಯವಸಾಯದಿಂದಲೇ ಪ್ರಾರಂಭವಾಯಿತೆಂದು ಹೇಳಬಹುದು. ನೀರು ಸರ್ವ ಪ್ರಾಣಿಗಳಿಗೂ ಅತ್ಯವಶ್ಯ ಮನುಷ್ಯ ಆಹಾರ ವಿಲ್ಲದೆ ಬದುಕಬಹುದು ಆದರೆ ನೀರು ಇಲ್ಲದೆ ಒಂದು ಕ್ಷಣವು ಬದುಕಲಾರ ಹೀಗಾಗಿ ನೀರು ಎಲ್ಲಾ ಚರಾಚರಗಳಿಗೂ ಅಮೂಲ್ಯವಾದದ್ದು. ಅಮೃತಕ್ಕೆ ಸಮನಾವಾದುದು. ಅಂತೆಯೇ ಪೂರ್ವ ಕಾಲದಲ್ಲಿನ ಮಾನವನು ಸ್ಥಳದಿಂದ ಸ್ಥಳಕ್ಕೆ ನೀರಿಗಾಗಿ ಅಲೆಮಾರಿ ಜೀವನವನ್ನು ಕಳೆದರೆ, ನಂತರದ ಮಧ್ಯಶಿಲಾಯುಗದ ವೇಳೆಗೆ ಮಾನವನು ನೀರು ಮತ್ತು ಆಹಾರಕ್ಕಾಗಿ ಒಂದು ಕಡೆ ಸ್ಥಿರವಾಗಿ ವಾಸಿಸುವದನ್ನು ಪ್ರಾರಂಭಿಸಿದ. ಮುಂದೆ ನವಶಿಲಾಯುಗದಲ್ಲಿನ ಮಾನವನು ತನ್ನ ಆಹಾರವನ್ನು ಉತ್ಪಾದಿಸಲು ಕಲಿತು ವಿವಿಧ ರೀತಿಯ ಬೆಳೆಗಳನ್ನು ಬೆಳೆಯಲು ಪ್ರಾರಂಭಿಸಿದ.

ನಂತರ ಮಾನವನು ತನ್ನ ವಾಸಸ್ಥಾನವನ್ನು ಮಳೆಯಾಗ ತಕ್ಕಂತಹ ಪ್ರದೇಶಗಳಿಗೆ ವರ್ಗಾಯಿಸಿಕೊಂಡ. ಆದರೆ ಅವನ ಸಂತತಿ, ಜನಸಂಖ್ಯೆ ಹೆಚ್ಚಿದಂತೆ ಮೂಲ ಸ್ಥಳದಿಂದ ಇತರ ಕಡಿಮೆ ಮಳೆಯಾಗುವಂತಹ ಪ್ರದೇಶಕ್ಕೆ ಹೋಗಿ ವಾಸ ಮಾಡಬೇಕಾಯಿತು. ಅವನು ಮಳೆಯೇ ಬಾರದಂತಹ ಕಾಲದಲ್ಲಿ ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಣ್ಣ ಹಳ್ಳ, ಕೊಳ್ಳ ಮತ್ತು ನದಿಗಳಿಗೆ ಅಡ್ಡಲಾಗಿ ರಂಬೆ, ಎಲೆ, ಮಣ್ಣು ಮತ್ತು ಕಲ್ಲುಗಳನ್ನು ಬಳಸಿ ಸಣ್ಣ ಒಡ್ಡುಗಳನ್ನು ಕಟ್ಟುತ್ತಿದ್ದ, ಜೋರಾಗಿ ಮಳೆ ಬಿದ್ದಾಗ ಆತ ಕಟ್ಟಿದಂತಹ ಒಡ್ಡುಗಳು ಕೊಚ್ಚಿಹೋಗುತ್ತಿದ್ದವು. ಅದನ್ನು ಮತ್ತೆ ಕಟ್ಟುತ್ತಿದ್ದ ಹೀಗೆ ಸಂಗ್ರವಾದಂತಹ ನೀರಿಗೆ ಸಣ್ಣ ಸಣ್ಣ ಕಾಲುವೆಗಳನ್ನು ನಿರ್ಮಿಸಿ ತಾನು ಮಾಡಿದ ಹೊಲಗಳಿಗೆ ನೀರು ಹಾಯಿಸುತ್ತಿದ್ದ. ಇದೇ ರೀತಿ ನೈಸರ್ಗಿಕವಾಗಿ ನಿರ್ಮಾಣವಾದಂತಹ ತಗ್ಗುಗಳಲ್ಲಿನ ನಿಂತ ನೀರನ್ನು ತನ್ನ ಹೊಲಗಳಿಗೆ ಉಪಯೋಗಿಸುವ ಜಾಣ್ಮೆಯನ್ನು ಕಲಿತನು.

ಕರ್ನಾಟಕದ ಉತ್ತರ ಭೂ ಭಾಗವನ್ನು ಆಳ್ವಿಕೆ ಮಾಡಿರುವಂತೆ ರಾಜಮನೆತನಗಳಾದ ಕದಂಬರು, ಗಂಗರು, ಬಾದಾಮಿಯ ಚಾಲುಕ್ಯರು, ಕಲ್ಯಾಣ ಚಾಲುಕ್ಯರು, ದ್ವಾರಸಮುದ್ರದ ಹೊಯ್ಸಳರು. ತದನಂತರ ಆಡಳಿತ ನಡೆಸಿದ ವಿಜಯನಗರ ಅರಸರು, ಸ್ಥಳೀಯ ಸಂಸ್ಥಾನಿಕರು, ಬಿಜಾಪುರದ ಆದಿಲ್‌ಶಾಹಿಗಳು, ಮರಾಠರು, ಸವಣೂರು ನವಾಬರು ಹಾಗೂ ಬ್ರಿಟಿಷ್ ಕಾಲದಲ್ಲಿ ತಮ್ಮದೇ ಆದ ಆಡಳಿತದ ಮಾರ್ಪಾಡುಗಳನ್ನು ಮಾಡಿಕೊಂಡು ಆಡಳಿತ ಮಾಡಿದ್ದಾರೆ. ಅವುಗಳು ಇತಿಹಾಸ ಪುಟದಿಂದ ಹಿಂದೆ ಸರಿದಿವೆ. ಆದರೆ ಆ ಕಾಲದಲ್ಲಿ ರಾಜ ಮಹಾರಾಜರು, ನಿರ್ಮಾಣ ಮಾಡಿದ ದೇವಾಲಯಗಳು, ಸಾರ್ವಜನಿಕ ಕಟ್ಟಡಗಳು, ರಕ್ಷಣೆಗಾಗಿ ನಿರ್ಮಾಣ ಮಾಡಲಾದಂತಹ ಕೋಟೆ ಕೊತ್ತಲಗಳು ಅದರಲ್ಲೂ ಪ್ರಮುಖವಾಗಿ ಕೆರೆ ಕಟ್ಟೆಗಳನ್ನು ನಿರ್ಮಾಣ ಮಾಡಿರುವುದನ್ನು ಈಗಲು ಸಹ ನಾವು ಇತಿಹಾಸದ ಆಧಾರಗಳಿಂದ ನೋಡಬಹುದಾಗಿದೆ.

## ಪರಾಮರ್ಶನ ಗ್ರಂಥಗಳು:


1. ಚನ್ನಕ್ಕ ಎಲಿಗಾರ, (1990), ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
2. ಚಿದಾನಂದಮೂರ್ತಿ ಎಂ., (1966), ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
3. ಬಿ. ಆರ್. ಗೋಪಾಲ (ಸಂ.), (1969), ಕರ್ನಾಟಕ ಇನ್ಸ್ಕ್ರಿಪ್ಷನ್ಸ್ – ಸಂಪುಟ 5 (ಶಾಸನ ಸಂಖ್ಯೆ: 59, ಹಾನಗಲ್, 1196 A.D), ಧಾರವಾಡ: ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ.
4. ಆರ್. ಎಸ್. ಪಂಚಮುಖಿ (ಸಂ.), (1941), ಕರ್ನಾಟಕ ಇನ್ಸ್ಕ್ರಿಪ್ಷನ್ಸ್ – ಸಂಪುಟ 1 (ಶಾಸನ ಸಂಖ್ಯೆ: 3 ಆಫ್ 1939–40), ಧಾರವಾಡ: ಕನ್ನಡ ಸಂಶೋಧನ ಸಂಸ್ಥೆ.
5. ಕೊಟ್ರಯ್ಯ ಸಿ. ಟಿ. ಎಮ್., (1995), ಇರಿಗೇಷನ್ ಸಿಸ್ಟಮ್ ಅಂಡರ್ ವಿಜಯನಗರ ಎಂಪೈರ್, ಮೈಸೂರು: ಪುರಾತತ್ವ ಮತ್ತು ವಸ್ತುಸಂಗ್ರಹಾಲಯಗಳ ನಿರ್ದೇಶನಾಲಯ.
6. ಕುಪ್ಪುಸ್ವಾಮಿ ಜಿ. ಆರ್., (1991), ಇರಿಗೇಷನ್ ಇನ್ ಕರ್ನಾಟಕ ಇನ್ಸ್ಕ್ರಿಪ್ಷನ್ಸ್ ಆಸ್ ಎ ಸೋರ್ಸ್.
7. ದೀಕ್ಷಿತ್ ಜಿ. ಎಸ್. ಮತ್ತು ಕುಪ್ಪುಸ್ವಾಮಿ ಜಿ. ಆರ್. (ಅನು: ನೀಲತ್ತಹಳ್ಳಿ ಕಸ್ತೂರಿ), (2000), ಕರ್ನಾಟಕದಲ್ಲಿ ಕೆರೆ ನೀರಾವರಿ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
8. ಜಗದೀಶ ಅಗಸಬಾಲ, (2002), ಮಧ್ಯಕಾಲೀನ ಕೆರೆಗಳ ತಾಂತ್ರಿಕತೆ ಮತ್ತು ಮಿತಿಗಳು (ಗ್ರಂಥ: ಕೆರೆ ನೀರಾವರಿ ನಿರ್ವಹಣೆ: ಚಾರಿತ್ರಿಕ ಅಧ್ಯಯನ, ಸಂ: ರಾಜರಾಮ ಹೆಗಡೆ), ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
9. ಕುಂಚೂರು ಬಸವರಾಜ, (2009), ನಮ್ಮೂರ ಕೆರೆಗಳು (ಪು.ಸಂ. 14), ದಾವಣಗೆರೆ: ಶ್ರೀ ಚಕ್ರ ಪ್ರಕಾಶನ (ಕುಂಚೂರು).
10. ಫ್ರಾನ್ಸಿಸ್ ಬುಖಾನನ್, (1988), ಎ ಜರ್ನಿ ಫ್ರಂ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರು, ಕೆನರಾಸ್ ಅಂಡ್ ಮಲಬಾರ್, ನವದೆಹಲಿ: ಏಷ್ಯನ್ ಎಜುಕೇಷನಲ್ ಸರ್ವಿಸಸ್ (ಮರುಮುದ್ರಣ).
11. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ, (ವರ್ಷ ಲಭ್ಯವಿಲ್ಲ), ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್ (S.I.I) – ಸಂಪುಟ 18 (ಶಾಸನ ಸಂಖ್ಯೆ: 136), ನವದೆಹಲಿ: ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ.
12. ಎ. ಎಂ. ಅಣ್ಣಿಗೇರಿ (ಸಂ.), (1961), ಕರ್ನಾಟಕ ಇನ್ಸ್ಕ್ರಿಪ್ಷನ್ಸ್ (K.I) – ಸಂಪುಟ 4 (ಶಾಸನ ಸಂಖ್ಯೆ: 53, ಹಾನಗಲ್), ಧಾರವಾಡ: ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ.